ಆ) ಈ ಯೋಜನೆಯನ್ನು ಕಾರ್ಯಗತಗೊಳಿಸಲು ಎಷ್ಟು ಸಮಯ ಬೇಕಾಗುವುದು,

ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ನೀಡಿರುವ ನೀರಿನ ಹಂಚಿಕೆ ಕುರಿತು ಪರಿಶೀಲಿಸಿ ಅಂತಿಮ ನಿರ್ಧಾರ ತೆಗೆದುಕೊಂಡ ನಂತರ ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ತೀರ್ಮಾನಿಸಲಾಗುವುದು

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1182(1598)**

ಮಾನ್ಯ ಸದಸ್ಯರ ಹೆಸರು **ಶ್ರೀ ಆರ್ ಧ್ರುವನಾರಾಯಣ (ಸಂತೆಮಾರಳ್ಳಿ)**

ಉತ್ತರಿಸುವ ಸಚಿವರು **ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ಕಬಿನಿ ಎರಡನೇಯ ಹಂತದ ಯೋಜನೆ ಜಾರಿಗೊಳಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು,

ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ನೀಡಿರುವ ನೀರಿನ ಹಂಚಿಕೆ ಕುರಿತು ಪರಿಶೀಲಿಸಿ ಅಂತಿಮ ನಿರ್ಧಾರ ತೆಗೆದುಕೊಂಡ ನಂತರ ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ತೀರ್ಮಾನಿಸಲಾಗುವುದು

ಆ) ಕಾವೇರಿ ನೀರಾವರಿ ತೀರ್ಪಿನಿಂದ ಈ ಯೋಜನೆಗೆ ಅಡ್ಡಿಯಾಗುವುದೇ, ಪರಿಶೀಲಿಸಲಾಗುತ್ತಿದೆ

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1184(1576)**

ಮಾನ್ಯ ಸದಸ್ಯರ ಹೆಸರು **ಶ್ರೀ ಗಡ್ಡದೇವರಮರ್ ಗಡ್ಡಯ್ಯಶಿವಮೂರ್ತಯ್ಯ (ಶಿರಹಟ್ಟಿ)**

ಉತ್ತರಿಸುವ ಸಚಿವರು **ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮಿಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**

ಅ) ಶಿರಹಟ್ಟಿ ತಾಲ್ಲೂಕಿನ ಚವಡಾಳ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ ಯಾವಾಗ ಮಂಜೂರಾಯಿತು (ತುಂಗಭದ್ರ ನದಿಯಿಂದ ನೀರು ಪೂರೈಸುವ ಯೋಜನೆ),

ಈ ಯೋಜನೆಗೆ ದಿನಾಂಕ 04–03–20902ರಲ್ಲಿ ಅನುಮೋದನೆ ನೀಡಿದೆ

ಆ) ಈ ಯೋಜನೆಯ ಅಂದಾಜು ಮೊತ್ತ ಎಷ್ಟು,

ರೂ 85 23ಲಕ್ಷ

ಇ) ಈ ಯೋಜನೆಯ ನಿರ್ವಹಣೆಯನ್ನು ಯಾವ ಏಜೆನ್ಸಿಗೆ ವಹಿಸಲಾಗಿದೆ,

ಈ ಯೋಜನೆಯ ಅನುಷ್ಠಾನವನ್ನು ಕರ್ನಾಟಕ ಬೂಸೇನಾ ನಿಗಮ ಗದಗ ಘಟಕಕ್ಕ ವಹಿಸಲಾಗಿದೆ

ಈ) ಈ ಯೋಜನೆ ಪೂರ್ಣಗೊಳ್ಳಲು ನಿಗದಿಪಡಿಸಿದ ಕಾಲಾವಧಿ ಎಷ್ಟು,

ಈ ಯೋಜನೆಯನ್ನು ಪೂರ್ಣಗೊಳಿಸಲು 18 ತಿಂಗಳು ನಿಗಧಿ ಪಡಿಸಲಾಗಿತ್ತು

ಉ) ನಿಗಧಿಪಡಿಸಿದ ಕಾಲಾವಧಿಯಲ್ಲಿ ಪೂರ್ಣಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಊ) ಬಂದಿದ್ದಲ್ಲಿ, ಈ ಏಜೆನ್ಸಿ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ,

ತುರ್ತಾಗಿ ಯೋಜನಾ ಕಾಮಗಾರಿಯನ್ನು ಪೂರ್ಣಗೊಳಿಸಲು ಕರ್ನಾಟಕ ಭೂ ಸೇನಾ ನಿಗಮಕ್ಕೆ ಸೂಚಿಸಲಾಗಿದ

ಋ) ಈ ಯೋಜನೆಯನ್ನು ಇನ್ನು ಎಷ್ಟು ದಿನಗಳೊಳಗಾಗಿ ಪೂರ್ಣಗೊಳಿಸಲಾಗುವುದು?

ಈಗಾಗಲೇ ಚೌಡಿಹಾಳ ಗ್ರಾಮಕ್ಕೆ ನೀರು ಪೂರೈಕೆ ಮಾಡಲಾಗುತ್ತಿದ್ದು ಉಳಿದ 3 ಗ್ರಾಮಗಳಿಗೆ ಶೀಘ್ರದಲ್ಲಿ ನೀರು ಪೂರೈಕೆಯಾಗುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1185(1586)**

ಮಾನ್ಯ ಸದಸ್ಯರ ಹೆಸರು . **ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್)**

ಉತ್ತರಿಸುವ ಸಚಿವರು **ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಎಷ್ಟು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳು ಜಾರಿಯಲ್ಲಿವೆ (ಗ್ರಾಮವಾರು ವಿವರಗಳನ್ನು ಹಾಗೂ ಅಂದಾಜು ವೆಚ್ಚದ ವಿವರಗಳನ್ನು ಒದಗಿಸುವುದು),